## 8

# ಸಕಲ ವಿಷಯದಲ್ಲೂ ದೇವರನ್ನು ಮಹಿಮೆ ಪಡಿಸಿರಿ (1 ಪೇತ್ರ 4:1-11)

ಒಂದು ಸಾರಿ ಒಬ್ಬ ಯೌವನಸ್ಥನಾದ ತಂದೆಯು ನನಗೆ "ಒಂದು ವೇಳೆ ನಾನು ಯಥಾ ದೃಷ್ಟಿಯ ರೂಪವನ್ನು ಕಾಣುವುದಾದರೆ ಎಂದು ಕೇಳಿದನು." ಅವನಿಗೆ ಒಂದು ಬಾರವಿತ್ತು. ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಹೆಚ್ಚು ಸಮಯವನ್ನು ಅವನು ಕಳೆಯುತ್ತಿರಲಿಲ್ಲ, ವ್ಯಾಪಾರದಲ್ಲಿ ಅವಿಶ್ರಾಂತಿ ಇಲ್ಲದಿದ್ದರು, ಅವನು ಅವಿಶ್ರಾಂತನಾಗಿ ಇದ್ದನು. ಅವನ ಜೀವನವು ಅವನನ್ನೇ ಸುತ್ತವರೆದಿತ್ತೇ ವಿನಃ ಅವನ ಕುಟುಂಬವನ್ನು ಸುತ್ತವರೆದಿರಲಿಲ್ಲ, ಅವನ ಜೀವನದಲ್ಲಿ ಪ್ರಾಮುಖ್ಯವಾದ ವಿಷಯಗಳಿಗೆ ಆಧ್ಯತೆಯನ್ನು ನೀಡಿ ಪ್ರಮುಖವಲ್ಲದ ವಿಷಯಗಳಿಗೆ ಆಧ್ಯತೆ ನೀಡಿರುವದಿಲ್ಲ ಎಂದು ತಿಳಿದಿದ್ದನು. ಆದರೆ ಹೇಗೆ ಬದಲಾಗಬೇಕು ಎಂಬ ವಿಷಯ ಮಾತ್ರ ಅವನು ತಿಳಿದಿರಲಿಲ್ಲ. ಅವನು ಮಾಡಬೇಕಾದದ್ದನ್ನು ಮಾಡಲಾರದೆ, ಇತರೆ ವಿಷಯಗಳನ್ನು ಒತ್ತಾಯ ಪೂರ್ವಕವಾಗಿ ಮಾಡುತ್ತಿದ್ದನು. ಅವನು ತಾನು ಸರಿಯಾದ ಕಾರ್ಯವನ್ನೆ ಮಾಡುತ್ತಿರುವವನೆಂದು ತಿಳಿದು ಜೀವಿತರ ಯಥಾ ದೃಷ್ಟಿಯ ರೂಪವನ್ನು ಬಯಸಿದನು.

ಒಬ್ಬನು ತನ್ನಲ್ಲಿ ಬೇಡವಾದ ಘಟನೆಯು ಸಂಭವಿಸಿದೆ ಎಂದು ತಿಳಿಯುವವರೆಗೂ ಬದಲಾವಣೆಯನ್ನು ಬಯಸುದಿಲ್ಲ. ಪಾಪದ ನಿಮಿತ್ತ ಸಿಕ್ಕಿಕೊಂಡಿರಬಹುದು. ಅಥವಾ ಪ್ರಾಮುಖ್ಯ ಸಂಗತಿಗಳನ್ನು ಮಾಡುವದರಿಂದ ಹಿಂಜರಿದಿರಬಹುದು, ಕೆಟ್ಟ ಚಟಗಳನ್ನು ಮುರಿದು ಹಾಕಲು ನಮಗೆ ಪರಿಹಾರದ ಅವಶ್ಯವಿರುತ್ತದೆ. ಪೇತ್ರನ ಓದುಗರಲ್ಲಿದು ಹಳೆಯ ಪಾಪವನ್ನು ಮತ್ತು ನಡವಳಿಕೆಯನ್ನು ಸರಿಪಡಿಸಿಕೊಳ್ಳಲು ಪೇತ್ರನು ಅವರಿಗೆ ಸಹಾಯಿಸಿದನು. "ಎಲ್ಲವುಗಳ ಅಂತ್ಯವು ಹತ್ತಿರವಾಯಿತು" ಎಂದು ನೆನಪಿಸಿದನು (4:7). ಅದು ಅವರ ಜೀವಿತಕ್ಕೆ ನೂತನ ವಾದ ಯಥಾದೃಷ್ಟಿಯ ರೂಪವನ್ನು ನೀಡಿತ್ತು. ಹೊಸ ಒಡಂಬಡಿಕೆಯ ಸಭೆಯು ಕರ್ತನ ಬರೋಣವನ್ನು ಯಥಾರ್ಥವಾಗಿ ಹಾರೈಸಿ, ಅದನ್ನೇ ಎದುರುನೋಡುತ್ತಿದ್ದರು.

### ಕ್ರಿಸ್ತನ ಉದ್ದೇಶಗಳನ್ನು ಧರಿಸಿಕೊಂಡು ಸಿದ್ಧವಾಗಿರಿ (4:1-3)

ಮರಣವನ್ನು ಮತ್ತು ಬಾಧೆಗಳನ್ನು ಅನುಭವಿಸಿರುವವನು, ಯುದ್ಧಾಸ್ತ್ರಗಳನ್ನು ಧರಿಸಿಕೊಂಡಿರುವ ಸೈನ್ಯವನ್ನು ಹಗುರವಾಗಿ ಪರಿಗಣಿಸುವದಿಲ್ಲ. ಪೇತ್ರನು ಈ ರಣರಂಗದ ಪದವನ್ನು ಉಪಯೋಗಿಸಿ, ಕ್ರೈಸ್ತರ ಗಂಭೀರತೆಯು ಹಗುರವಾಗಿದೆ ಎಂದು ತಿಳಿಸಿ, ಅವರು ಶುಭ ಮತ್ತು ವೈಯಕ್ತಿಕವಾದ ಸಮಗ್ರ ಚಿತ್ತವನ್ನು ಹೊಂದಿರಬೇಕೆಂದು ಎಚ್ಚರಿಸಿದನು. ಅವರು ಕ್ರಿಸ್ತನ ಉದ್ದೇಶಗಳನ್ನು ಧರಿಸಿದವರಾಗಿ ಸಿದ್ಧರಾಗಬೇಕಿತ್ತು (4:1). ಫಿಲಿಪ್ಪಿ 2:5ರ ಆಲೋಚ ನೆಯೂ ಇದೇ ಆಗಿರುತ್ತದೆ: "ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ."

4:1 ರಿಂದ ಪೇತ್ರನ ಆಲೋಚನೆಯು ಮುಂದುವರೆದು ಬೆಳೆಯುತ್ತದೆ (1) ಕ್ರಿಸ್ತನ ಬಾಧೆಗಳು (2) ಕ್ರೈಸ್ತರು ಕ್ರಿಸ್ತನ ಉದ್ದೇಶಗಳನ್ನು ಧರಿಸಿಕೊಳ್ಳಬೇಕು (3) ಬಾಧೆಗಳನ್ನು ಅನುಭವಿಸುವದು ಮತ್ತು ಪಾಪವನ್ನು ತ್ಯಜಿಸುವುದು. ಈ ಯೋಚನೆಗಳ ಸಂಬಂಧವನ್ನು ಅರಿಯಲು ವಚನ 1ನ್ನು ಗಮನಿಸಿ, ಅದು ಅಲ್ಪ ಅರ್ಥವನ್ನು ಮಾತ್ರ ನೀಡುತ್ತದೆ. ಮೊದಲ ಎರಡು ಆಲೋಚ ನೆಗಳು ಈ ರೀತಿಯಾಗಿ ಸಂಬಂಧಿಸಬಹುದು: ಜನರು ಬಾಧೆಪಡುವಾಗ ಅವರ ಬಾಧೆಗಳು

ಕ್ರಿಸ್ತನ ಬಾಧೆಗಳ ಮಾದರಿಗೆ ಸಮಾನವಾಗಿರತಕ್ಕದ್ದು, ಬಾಧೆಗಳನ್ನು ಸಹಿಸುವುದು ಮಾತ್ರವಲ್ಲ, ಅವರ ದೃಷ್ಟಿಕೋನವು ಸಹ ಸರಿಯಾಗಿರುವಂತೆ, ಕ್ರೈಸ್ತರು ಈ ಉದ್ದೇಶಗಳನ್ನು ಧರಿಸಿಕೊಂಡವರಾಗಿ ಸನ್ನದ್ಧರಾಗಿರಬೇಕು. ಅವನು ಇತರೆಪತ್ರಿಕೆಗಳಲ್ಲಿ ಮಾಡಿರುವಂತೆ, ಕ್ರಿಸ್ತನೇ ಮಾದರಿಯಾಗಿರುವದರಿಂದ ಆತನ ಜನರು ಆತನನ್ನೆ ಹಿಂಬಾಲಿಸಬೇಕು.

ವಚನ 1ರ ಕಡೆಯ ಭಾಗವು ಕಷ್ಟಕರವಾಗಿದೆ: "ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟನು ಮತ್ತು ಪಾಪದಿಂದ ತಪ್ಪಿಸಿಕೊಂಡನು." ಇದರಲ್ಲಿ ಎರಡು ವಿಧವಾದ ವ್ಯಾಖ್ಯಾನಗಳಿವೆ. (1) ಬಹುಶಃ ಬಾಧೆಯು ಸಕಾರಾತ್ಮಕವಾದ ಪರಿಣಾಮವನ್ನು ಕ್ರೈಸ್ತರ ಮೇಲೆ ಬೀರುತ್ತದೆ. ಕ್ರಿಸ್ತನಿಗಾಗಿ ಬಾಧೆ ಪಟ್ಟಿರುವವನು ಮಾತ್ರ ಪಾಪವನ್ನು ಮಾಡದಂತೆ ಬಲವನ್ನು ಹೊಂದಿರುತ್ತಾನೆ, ಇಲ್ಲದೆ ಹೋದರೆ ಅವನಿಗೆ ಸಾಧ್ಯವಿಲ್ಲ. ಅವನು ಪಾಪದಿಂದ ತಪ್ಪಿಸಿಕೊಂಡಿರುವದರಿಂದ, ಲೋಕವಾಗಲಿ ಅಥವಾ ಶರೀರವಾಗಲಿ ಅವನ ಮೇಲೆ ದೊರೆತನ ಮಾಡುವದಿಲ್ಲ.

(2) "ಶರೀರದಲ್ಲೆ ಬಾಧೆಪಟ್ಟನು" ಎಂಬ ಇನ್ನೊಂದು ವ್ಯಾಖ್ಯಾನವು, ಮರಣದ ರೂಪಕವಾಗಿರುತ್ತದೆ ಅದು ಆತ್ಮೀಕವಾದ ಮರಣ, ಪಾಪದ ಹಳೆಯ ಸ್ವಭಾವದ, ಮರಣ. ಕ್ರೈಸ್ತನು ಪಾಪಕ್ಕೆ ಸಾಯುವದರಿಂದ, ಕರ್ತನಲ್ಲಿ ಜೀವವನ್ನು ಪಡೆಯುವನು ಎಂದು ಪೇತ್ರನು ಹೋಲಿಸುತ್ತಾನೆ. ನಂತರದ ವಚನದಲ್ಲಿ (4:2) ಕ್ರಿಸ್ತೀಯ ಜೀವಿತವನ್ನು ವಿವರಿಸಿದ್ದಾನೆ. ಅದರ ಹಿಂದಿನ ವಚನದಲ್ಲಿ (3:21) ದೀಕ್ಷಾಸ್ನಾನದ ಕುರಿತಾಗಿ ಹೇಳಿದ್ದಾನೆ. ರೋಮಪುರ 6ರಲ್ಲಿ ಪೌಲನು ದೀಕ್ಷಾಸ್ನಾನವು, ಹಳೆಯ ಸ್ವಭಾವದ ಮತ್ತು ಪಾಪದ ಮರಣವಾಗಿದ್ದು, ನೂತನ ಜೀವಿತಕ್ಕೆ ಪುನರುತ್ಥಾನವಾಗಿದೆ ಎಂದು ತಿಳಿಸಿದ್ದಾನೆ. ರೋಮಾಪುರ 6:7 ನಮ್ಮ ಮುಂದಿರುವ ವಾಕ್ಯದಂತಿದೆ: "ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ." ಈ ಪದಗಳು ಮತ್ತು 1 ಪೇತ್ರ 4:1 ಅನೇಕ ಅಂಶಗಳಲ್ಲಿ ಒಂದೇ ಆಗಿರುತ್ತದೆ. ಪೌಲನು ಅನೇಕ ವರ್ಷಗಳ ಹಿಂದೆ ಈ ಪತ್ರವನ್ನು ರೋಮಾಪುರದವರಿಗೆ ಬರೆದಿದ್ದನು. ಪೇತ್ರನು ಆ ಎಲ್ಲಾ ವಿಷಯಗಳನ್ನು ಓದಿದ್ದನು, ಈ ಕಾರಣದಿಂದ ಎರಡನೆಯ ವ್ಯಾಖ್ಯಾನವು ಬಹುಶಃ ಸರಿಯಾದದ್ದೆ.

ಹಳೆಯ ಪಾಪದ ಜೀವಿತವು ಕ್ರಿಸ್ತನಲ್ಲಿ ಜೀವವನ್ನು ಹೊಂದಲು ಕ್ರೈಸ್ತನಿಗೆ ಅನುಕೂಲಕರವೇ ಆಗಿರಬಹುದು, ಆದರೆ ಹಳೆಯ ಚಟಗಳನ್ನು ಮುರಿದು ಹಾಕುವಂಥದ್ದು ಕಷ್ಟಕರವೆ. ಇಲ್ಲಿ ಅವನ ಓದುಗರು ತಮ್ಮ ಜೀವಿತದ ಸಾಕಷ್ಟು ಭಾಗವನ್ನು ಶರೀರದಾಶೆಗೂ, ಅಸಹ್ಯಭಾವಕ್ಕೂ ಮತ್ತು ದೂರಾಶೆಗೂ (4:3) ಒಳಪಡಿಸಿದ್ದರು ಎಂದು ಪೇತ್ರನು ನೆನಪಿಸುತ್ತಿದ್ದಾನೆ. ಅವರ ಹಳೆಯ ಜೀವಿತದ ಸ್ವಭಾವವು ಅವರನ್ನು ಹಂಗಿಸಿತ್ತು ಮತ್ತು ಅದು ಅವರಿಗೆ ಭಾರವಾಗಿತ್ತು. ಕ್ರಿಸ್ತನಲ್ಲಿರುವ ಜೀವವು ಹಳೇ ಸ್ವಭಾವದ ಮರಣವನ್ನು ಬಯಸಿತ್ತು. ಅವರು ಶೋಧನೆಯನ್ನು ಎದುರಿಸಿ ಹಿಂದಿರುಗಬೇಕಿತ್ತು ಅಥವಾ ರಾಜಿಮಾಡಿಕೊಳ್ಳಬೇಕಿತ್ತು - ಅದು ಜೀವದ ಮಾರ್ಗವಾಗಿತ್ತು.

## ಚದುರಿಸುವವರ ಜೀವಿತವನ್ನು ತಿರಸ್ಕರಿಸಿರಿ (4:4-6)

ಆಸ್ಯ ಸೀಮೆಯ ಗ್ರೀಕ್ ಪಟ್ಟಣಗಳಲ್ಲಿ ಸಮಾಜದ ಹಾಗೂ ಸಾಮೂಹಿಕವಾದ ಜೀವನ ಶೈಲಿಯು ಮೂರ್ತಿ ಪೂಜೆಗೆ ನೇರ ಸಂಬಂಧವನ್ನು ಹೊಂದಿತ್ತು. ಕುಡಿತ ಮತ್ತು ಅನೈತಿಕತೆ ಪೂಜೆಯನ್ನು ಒಳಗೊಂಡಿದ್ದವು. ಕ್ರೈಸ್ತರು ಅನ್ಯರ ಸಮಾರಂಭಗಳನ್ನು ತಿರಸ್ಕರಿಸಿದ್ದರು ಮತ್ತು ಅವರ ಕ್ರಿಡೆಗಳಲ್ಲಿ ಭಾಗಿಗಳಾಗದೆ ಇರುವಂಥದ್ದು ಅವರು ಸ್ವ - ಮೇಲ್ಮಟ್ಟದಲ್ಲಿದರು, ಸಮುದಾಯದ ಐಖ್ಯತೆಯನ್ನು ಹೊಂದದವರು ಎಂದು ಅನ್ಯರು ನಿರ್ಣಯಿಸಿದ್ದರು.

ಎರಡನೇ ಶತಮಾನದ ಮಧ್ಯದಲ್ಲಿದ್ದ ರೆಟೋರಿಷಿಯನ್ ಏಲಿಯಸ್ ಅರಿಸ್ಟೈಡ್ಸ್ ಅವನ ಕಾಲದ ತತ್ವಜ್ಞಾನಿಗಳನ್ನು ಹಾಗೂ ಕ್ರೈಸ್ತರನ್ನು ವಿಮರ್ಷಿಸಿ. ಈ ರೀತಿ ಹೇಳಿದನು,

> ಪ್ಯಾಲಿಸ್ತೇನಿನಲ್ಲಿ ದೇವ ದೂಷಣೆ ಮಾಡಿದ ಜನರ ಜೀವನ ದಂತೆಯೇ, ಅವರ

ವರ್ತನೆಗಳು ಇದ್ದವು. [ಕ್ರೈಸ್ತರಾದವರೂ ಸಹ] ಅವರೂ ಸಹ, ತಮ್ಮ ಸಹಜವಾದ ಸನ್ನೆಗಳಿಂದ ಅವರ ಭಕ್ತಿಹೀನತೆಯನ್ನು ತೋರಿಸಿ, ಅವರ ಮೇಲೆ ಇದ್ದ ಅಧಿಕಾರವನ್ನು ಗ್ರಹಿಸಲಿಲ್ಲ, ಅವರು ಗ್ರೀಕ್‌ರಿಂದ ಪ್ರತ್ಯೇಕಿಸಿಕೊಂಡು ಮತ್ತು ಒಳ್ಳೆಯದರಿಂದಲೂ ಪ್ರತ್ಯೇಕವಾದರು.[1]

ಪೇತ್ರನ ಕಾಲದಲ್ಲಿ ವಾಸಿಸಿದ ಅರಿಸ್ಟ್ರೆಡನು, ಅಪೋಸ್ತಲರು ಸಲಹೆ ನೀಡಿದ ಮಾದರಿಯಲ್ಲಿಯೇ ಕ್ರೈಸ್ತರ ಬಗ್ಗೆ ನಿಂದನೆಯನ್ನು ಮಾಡಿದನು, "ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೆ ಇದ್ದದ್ದಕ್ಕೆ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ" (4:4).

ಅರಿಸ್ಟ್ರೆಡನು ಬಾಯಿ ಮಾತಿನ ಬೈಗುಳವನ್ನು ನೀಡಿರುವುದು ಒಂದು ವಿಷಯವಾಗಿದೆ. ಬಾಯಿಮಾತಿನ ಬೈಗುಳವು ಕೆಲವು ಸಾರಿ ದೈಹೀಕ ಹಿಂಸೆಯನ್ನು ಪ್ರಚೋದಿಸಿತ್ತು. ಗ್ರೀಕ್‌ನಲ್ಲಿದ್ದ ಬಡವರು ಮತ್ತು ದಲಿತರು ಕ್ರೈಸ್ತರ ಸಂಖ್ಯೆಯನ್ನು ಹೆಚ್ಚುಮಾಡಿದ್ದರು, ಮೇಲಿನ ತರಗತಿಯ ಜನರು ನಿರ್ಗತಿಕರನ್ನು ಹೀನವಾಗಿ ಕಾಣುತ್ತಿದ್ದರು. ಪಾಂಪೆಯಲ್ಲಿ ಒಬ್ಬನು ಈ ರೀತಿಯಾಗಿ ಬರೆದಿರುವನು ಅದು ಮೌಂಟ್ ವೆಸೂವಿಯಲ್‌ನಲ್ಲಿ ಹೂಣಿಡಲಾಗಿತ್ತೋ, ಪೇತ್ರನ ಪತ್ರಿಕೆ ಹದಿನೈದು ವರ್ಷಹಳೆಯದಾಗಿತ್ತು. "ನಾನು ಬಡವರನ್ನು ದ್ವೇಷಿಸುತ್ತೇನೆ. ಏನೂ ಇಲ್ಲದ್ದಕ್ಕೆ ಏನನ್ನು ಬಯಸುವವನು ಮೂರ್ಖನಾಗಿದ್ದಾನೆ. ಅವನು ಅದಕ್ಕೆ ಕ್ರಯನೀಡಿದರೆ ಅದನ್ನು ಅವನು ಪಡೆಯಬಹುದು." ಬಡತನವು ಕ್ರೈಸ್ತತ್ವಕ್ಕೆ ಹೆಚ್ಚಿನ ಅಪಕೀರ್ತಿಯಾಗಿತ್ತು. ಪೇತ್ರನು ಈ ಕ್ರೈಸ್ತರಿಗೆ ಈ ಆಧರಣೆಯನ್ನು ನೀಡಿದ್ದನು, ಕ್ರೈಸ್ತರನ್ನು ನಿಂದಿಸುವವರು, "ಬದುಕುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಸಿದ್ಧವಾಗಿರುವಾತನಿಗೆ ಉತ್ತರಕೊಡಬೇಕು" (4:5).

ಇಪ್ಪತ್ತನೇ - ಶತಮಾನದಲ್ಲಿ ಜೀವಿಸುತ್ತಿರುವ ಕ್ರೈಸ್ತರಿಗೆ ಇದು ಯಾವ ಸಂದೇಶವನ್ನು ನೀಡುತ್ತದೆ? ಅವರು ಮೊದಲನೆಯ ಶತಮಾನದಲ್ಲಿರುವವರಂತೆ ಒತ್ತಾಯಕ್ಕೆ ಒಳಗಾಗಲಿಲ್ಲ. ಆ ಕ್ರೈಸ್ತರು ಆ ಪ್ರಪಂಚದ ಮಧ್ಯಪಾನೋತ್ಸವದಲ್ಲೂ ಮತ್ತು ಭ್ರಷ್ಟವಾದ ವಿಷಯ ಪಟಿಂಗತನದಲ್ಲಿ ಪಾಲುಗಾರರಾಗಬೇಕಿತ್ತು. ಮಧ್ಯಪಾನ ನಿರಾಕರಿಸುವ ಕ್ರೈಸ್ತರನ್ನು ಮನರಂಜನೆಗಾಗಿ ಬಳಸುತ್ತಿದ್ದರು, ಸಾಯಂಕಾಲದ ದೂರ ದರ್ಶನದಲ್ಲಿ ಪ್ರಸಾರ ಮಾಡಲ್ಪಡುವ ಸುಲಭವಾದ ಕಾಮಾಭಿಲಾಶೆಯನ್ನು ತಿರಸ್ಕರಿಸುವವರು, ಸಾರ್ವಜನಿಕ ಜೂಜಾಟಕ್ಕೂ ಮತ್ತು ಗರ್ಭಪಾತದ ವಿರುದ್ಧವಾಗಿ ಅಧಿಕಾರಕ್ಕೆ ತಿರುಗಿ ಬೀಳುವವರು, ಅವರು ಯಾವುದನ್ನು ಉತ್ತೇಜಿಸುತ್ತಿದ್ದರು ಮತ್ತು ಯಾವುದನ್ನು ಉತ್ತೇಜಿಸುವದಿಲ್ಲ ಎಂಬ ನಿಯಮಗಳನ್ನು ಹೊಂದಿದ್ದರೋ ಅವರ ಅಪಾದನೆಗಳು ಆಶ್ಚರ್ಯಕರವಾಗಿ ತೋರುತ್ತಿತ್ತು, ಅವರು ಒತ್ತಾಯಕ್ಕೆ ಒಳಗಾಗುತ್ತಿದ್ದರು. ಎಲ್ಲಾ ಕಾಲದಲ್ಲು ಇದ್ದಂತೆ, ಇಪ್ಪತ್ತನೇ - ಶತಮಾನದ ಕ್ರೈಸ್ತರಿಗೂ ಪೇತ್ರನು ಎಚ್ಚರಿಕೆಯ ಸೂಚನೆಗಳನ್ನು ನೀಡಿದ್ದಾನೆ (4:1-6).

4:6ರಲ್ಲಿ, "ಸತ್ತಿರುವವರು ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಿದರು: ಅವರು ಆತ್ಮ ಸಂಬಂಧವಾಗಿ ದೇವರ ಜೀವದಲ್ಲಿ ಪಾಲುಗಾರರಾಗುವಂತೆ ಅವರಿಗೂ ಸುವಾರ್ತೆಯು ತಿಳಿಸಲ್ಪಟ್ಟಿತು." ಇಲ್ಲಿ ನಾವು ಯಾವ ರೀತಿಯಾದ ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳುತ್ತೇವೆ ಎಂಬ ಅಂಶವನ್ನು 3:19, 20ರಲ್ಲಿ ಇರುವದಾಗಿದೆ. ಕ್ರಿಸ್ತನು ತನ್ನ ಜಯದ ವಾರ್ತೆಯನ್ನು ತಿಳಿಸಲು ಇಳಿದು ಹೋದನು ಎಂದು ಆ ವಚನಗಳು ತಿಳಿಸುವುದಾದರೆ, 4:6 ತಿಳಿಸುತ್ತದೆ ಆತನು ಅಲ್ಲಿಗೆ ಹೋದ ಪರಿಣಾಮವು ಅವರು ಬದುಕುವಂತೆ ಮಾಡಿದೆ. "ಅವರು ಆತ್ಮಸಂಬದವಾಗಿ ದೇವರ ಜೀವದಲ್ಲಿ ಪಾಲುಗಾರರು." ನಾವು ಕ್ರಿಸ್ತನಿಲ್ಲದೆಯೂ, ಪಾಪದಲ್ಲಿ ಇರುವವರಾಗಿಯೂ ಮರಣವನ್ನು ಅನುಭವಿಸಬಹುದೇ, ಮತ್ತು ಮರಣದ ನಂತರ ಮಾನಸಾಂತರಪಟ್ಟು ರಕ್ಷಣೆ ಹೊಂದಲು ಇನ್ನೊಂದು ಅವಕಾಶವನ್ನು ಪಡೆಯಬಹುದೇ? ಅದು ಕಷ್ಟಕರವೇ! ಆ ವಚನವನ್ನು ಹತ್ತಿರದಿಂದ ನೋಡುವಾಗ ಕಾಲಗಳು

ಬದಲಾಗುತ್ತವೆ. ಸುವಾರ್ತೆಯು ಸಾರಲ್ಪಟ್ಟಿತ್ತು. ಪೇತ್ರನು ಈ ಪತ್ರವನ್ನು ಬರೆಯುವ ಸಮಯದಲ್ಲಿ ಅವರು ಈಗಾಗಲೇ "ಮರಣವನ್ನು" ಹೊಂದಿದ್ದರು. ಸುವಾರ್ತೆಯು ಸಾರಲ್ಪಡುವಾಗ ಅವರು ಮೃತರಾಗಿದ್ದರು ಎಂದು ವಚನವು ಯಾವ ವಿಚಾರವನ್ನು ತಿಳಿಸುವದಿಲ್ಲ.

ಒಂದು ವೇಳೆ 4:6 ಮನುಷ್ಯನು ಮರಣದ ನಂತರವೂ, ಮಾನಸಾಂತರ ಪಟ್ಟು ರಕ್ಷಣೆಯನ್ನು ಹೊಂದಬಹುದು ಎಂದು ಈ ವಚನವು ತಿಳಿಸುತ್ತಿಲ್ಲ, ಒಂದು ವೇಳೆ ಆ ರೀತಿ ಇದ್ದರೆ, ಇತರೆ ಹೊಸ ಒಡಂಬಡಿಕೆಯ ವಾಕ್ಯಗಳಲ್ಲಿ ವ್ಯತ್ಯಾಸವನ್ನು ಮಾಡುವಂಥದ್ದಾಗಿರುತ್ತದೆ. ಇಬ್ರಿಯ 9:27, 28 ತಿಳಿಸುತ್ತದೆ, "ಒಂದೇ ಸಾರಿ ಸಾಯುವುದು ಆ ಮೇಲೆ ನ್ಯಾಯ ತೀರ್ಪು ಮನುಷ್ಯರಿಗೆ ಹೇಗೆ ನೇಮಕವಾಗಿದೆಯೇ ಹಾಗೆಯೇ ಕ್ರಿಸ್ತನು ಸಹ ಬಹು ಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು. ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟುಮಾಡುವದಕ್ಕೋಸ್ಕರ ಪಾಪ ಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು." ಯೋಹಾನ 5:28, 29ರಲ್ಲಿ ಸಮಾಧಿಯಲ್ಲಿರುವವರೂ ಸಹ ಆತನ ಸ್ವರವನ್ನು ಕೇಳುವರು, ಕೆಲವರು ಪುನರುತ್ಥಾನ ಹೊಂದುವರು ಇನ್ನೂ ಕೆಲವರು ತೀರ್ಪಿಗಾಗಿ ಪುನರುತ್ಥಾನವಾಗುವರು. ಮರಣ ನಂತರ ರಕ್ಷಣೆಯನ್ನು ಅವನು ನೀಡಲಿಲ್ಲ. ಇತರೆ ವಚನಗಳು (1 ಥೆಸಲೋನಿಕ 4:13-18; ರೋಮಾಪುರ 2:3; 14:10; 1 ಕೊರಿಂಥ 4:5; 2 ಕೊರಿಂಥ 5:10; 2 ಪೇತ್ರ 3:7) ಇದನ್ನೆ ಬೋಧಿಸುತ್ತವೆ. ಮರಣಕ್ಕೆ ಮೊದಲೇ ಅವರಿಗೆ ಸುವಾರ್ತೆಯು ಸಾರಲ್ಪಟ್ಟಿತು ಎಂದು ಪೇತ್ರನ ನಿರ್ಣಯವಿರಬಹುದು. ಅವರ ಶಾರೀರಿಕ ಕ್ರಿಯೆಗಳಿಗಾಗಿ ಅವರಿಗೆ ತೀರ್ಪು ಮಾಡುವುದಾದರೆ, ಅವರು ತಮ್ಮ ಪಾಪದಲ್ಲಿಯೇ ಕಳೆದು ಹೋಗಿರಬಹುದು, ಆದರೆ ಅವರು ಸುವಾರ್ತೆಯನ್ನು ನಂಬಿ ವಿಧೇಯರಾಗಿದ್ದರೆ, ಅವರಿಗೆ ರಕ್ಷಣೆಯಾಗಬಹುದು. ಪೇತ್ರನು ಹೇಳಿದ್ದು, "ದೇವರ ಚಿತ್ತಕ್ಕನುಗುಣವಾಗಿ ಆತ್ಮದಲ್ಲಿ ಜೀವಿಸಿರಿ."

## ಎಲ್ಲವುಗಳ ಅಂತ್ಯವು ಹತ್ತಿರವಾಯಿತೆಂದು ಅರಿತುಕೊಳ್ಳಿರಿ (4:7-11)

ಕ್ರೈಸ್ತರು ಕೇವಲ ಕ್ರಿಸ್ತನ ಬರೋಣವನ್ನು ಮಾತ್ರ ಹಾರೈಸುವದಿಲ್ಲ; ಆತನ ಬರುವಿಕೆಯಲ್ಲಿ ಉಂಟಾಗುವ ಸಂಭವಿಸಬಹುದಾದ ಘಟನೆಗಳನ್ನು ಸಹ ಎದುರು ನೋಡುತ್ತಾರೆ ಇದು ಯಾವಾಗಲೂ ಇದೇ ರೀತಿ ಇರುತ್ತದೆ. ಪೌಲನು ಅಂತ್ಯಗೊಳಿಸಿದಂತೆ 1 ಕೊರಿಂಥದಲ್ಲಿ ಎರಡು ಅರಮಾಯದ ಪದಗಳು ಮಾರಾನಾಥ, "ಬಾ ಕರ್ತನೆ" ಎಂಬ ಸರಳವಾದ ಅರ್ಥ ಬೈಬಲಿನ ಕಡೆಯ ಪುಸ್ತಕದ ಕಡೆಯ ವಚನ: "ಹಾಗೆಯೇ ಆಗಲಿ, ಕರ್ತನಾದ ಯೇಸುವೇ ಬಾ" ಎಂಬುದಾಗಿದೆ (ಪ್ರಕಟನೆ 22:20). ಪೌಲನು ಹೇಳಿದ್ದು, "ಸಹೋದರರೇ ನಾನು ಹೇಳುವದೇನೆಂದರೆ - ಸಮಯವು ಸಂಕೋಚವಾದದ್ದರಿಂದ" (1 ಕೊರಿಂಥ 7:29). ಯಾಕೋಬನು ಹೇಳಿದ್ದು, "ನಿಮ್ಮ ಹೃದಯಗಳನ್ನು ದೃಢಪಡಿಸಿಕೊಳ್ಳಿರಿ, ಕರ್ತನ ಪ್ರತ್ಯಕ್ಷತೆಯು ಹತ್ತಿರವಾಯಿತು" (ಯಾಕೋಬ 5:8). ಆದಿ ಸಭೆಯು ಆತನು ಬರುವಾಗ ಉಂಟಾಗುವ ಘಟನೆಗಳನ್ನು ಎದುರು ನೋಡುವಾಗ, "ಹೀಗಿರಲಾಗಿ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ" ಎಂದು ಕ್ರಿಸ್ತನು ಹೇಳಿದಂತೆ ನಡೆದಿದ್ದರು (ಮತ್ತಾಯ 24:42).

ಎರಡು ಸಾವಿರ ವರುಷಗಳು ಸಂದು ಹೋದರು, ಸಭೆಯು "ಯೇಸು ಬೇಗ ಬರುತ್ತಾನೆ" ಎಂದು ಹಾಡುತ್ತಲೇ ಇರುವುದು ಸಭೆಯು ಮರಣ, ಸ್ವರ್ಗ, ನರಕ ಮತ್ತು "ದೈವ ಶಿಕ್ಷೆಗಳನ್ನು ನಂಬುವ ಸಮೂದಾಯವಾಗಿರುತ್ತದೆ." ಅದು ಅಂತ್ಯದಲ್ಲಿ ಜೀವಿಸುತ್ತದೆ. ಎಂಬ ಅರ್ಥವಿದೆ. ಯೇಸು ಬರುತ್ತಾನೆ ಎಂಬ ವಿಷಯವು ಕ್ರೈಸ್ತರಿಗೆ ದೂರದೃಷ್ಟಿಯನ್ನು ಮತ್ತು ಜೀವಿಸುವ ಶಕ್ತಿಯನ್ನು ನೀಡುತ್ತದೆ ಎಂಬ ಶೂನ್ಯ ಶಕ್ತಿಯಲ್ಲ: "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" (4:7) ಎಂಬ ಈ ವಿಷಯವೇ. ಇದನ್ನು ಅರಿಯುವ ಅಗತ್ಯವೆಂದು ಸೆಳೆಯುವಂಥದ್ದಾಗಿದೆ.

**ನ್ಯಾಯವಾದ ತೀರ್ಪನ್ನು ಮಾಡಿರಿ**

ದೆವ್ವ ಹಿಡಿದವನನ್ನು ಯೇಸು ಗುಣಪಡಿಸಿದ್ದನು, ಈ ಘಟನೆಯನ್ನು ನೋಡಲು ಪಟ್ಟಣದಿಂದ ಜನರು ಬಂದಿದ್ದರು ಎಂದು ಮಾರ್ಕನು ತಿಳಿಸಿದ್ದಾನೆ. ಅವರು ಅಲ್ಲಿಗೆ ಬಂದಾಗ ದೆವ್ವದ ದಂಡಿನಿಂದ ಹಿಡಿಯಲ್ಪಟ್ಟವನು "ಬಟ್ಟೆಯನ್ನು ಧರಿಸಿದವನಾಗಿ ಸ್ವಸ್ಥಬುದ್ಧಿಯಿಂದ ಕೂತುಕೊಂಡಿದ್ದು" (ಮಾರ್ಕ 5:15). "ಸ್ವಸ್ಥಬುದ್ಧಿಯಿಂದ" ಕೂತುಕೊಂಡಿದ್ದನು ಅಂದರೆ "ಸ್ವಸ್ಥ ತೀರ್ಪನ್ನು ಹೊಂದಿದವನು" ಅಥವಾ "ಸ್ಪಷ್ಟವಾದ ಮನಸ್ಸಿನಿಂದ" (NIV) 4:7 ಎಂಬ ಅರ್ಥವಾಗಿದೆ. ಪೇತ್ರನು ತನ್ನ ಓದುಗರು ತಿಳುವಳಿಕೆಯಿಂದಲೂ, ಸಿದ್ಧರಾಗಿಯೂ, ನೆಚ್ಚಬಹುದಾದ ಮತ್ತು ಸರಿಯಾದ ಮನಸ್ಸಿನವರು ಆಗಿರಬೇಕೆಂದು ಬೇಡಿಕೊಂಡನು.

ಎಲ್ಲವುಗಳ ಅಂತ್ಯವು ಹತ್ತಿರವಾಗಿರುವದರಿಂದ "ನಾವುಗಳು ಸರಿಯಾದ ತೀರ್ಪನ್ನು ಹೊಂದಿದವರು ಸ್ಥಿರಮನಸ್ಸಿನವರು ಆಗಿರಬೇಕು" ಕ್ರೈಸ್ತ ಜೀವಿತಕ್ಕೆ ಈ ಸಲಹೆಯ ವಾಕ್ಯಗಳು ಗಂಭೀರವಾದ ಮಾರ್ಗದರ್ಶನವಾಗಿವೆ. ವಿಲಿಯಮ್ ಜೇಮ್ಸ್‌ರವರು ತಮ್ಮ *ವೆರೈಟೀಸ್ ಆಫ್ ರಿಲೀಜಿಯಸ್ ಎಕ್ಸ್‌ಪೀಯರೆನ್ಸ್* ಎಂಬ ಪುಸ್ತಕದಲ್ಲಿ ಧಾರ್ಮಿಕತೆ ಅಂದರೆ ಏನು ಎಂದು ತಿಳಿಸಿದ್ದಾರೆ. ಕೆಲವು ವಿಷಯಗಳನ್ನು ವಿಂಗಡಿಸಿ ಪರಿಶೀಲಿಸಿದ ನಂತರ, ಧಾರ್ಮಿಕತೆಯನ್ನು ಗಂಭೀರವಾಗಿ ಪರಿಶೀಲಿಸುವುದೇ ಅದರ ಮೂಲ ಅವಶ್ಯಕತೆಯಾಗಿರುತ್ತದೆ. ಕ್ರೈಸ್ತತ್ವವು ಮಂಕುಬಡಿದ ಧರ್ಮವಾಗಿರದೆ, ತಾನು ಬಯಸುವ, ನಿರೀಕ್ಷಿಸುವ ಅದರ ಭಯ ಭೀತಿಯ ಸಂದೇಶವನ್ನು ತಿಳಿಸುತ್ತದೆ. ಇಂಥ ಕಾರ್ಯಗಳು ಅದನ್ನು ಪ್ರಾರ್ಥನೆಗೆ ನಡೆಸುತ್ತದೆ, ಪ್ರಾರ್ಥನೆಯು ಧರ್ಮದ ಮೂಲವಾಗಿರುತ್ತದೆ.

**ಪರಸ್ಪರರನ್ನು ಪ್ರೀತಿಸುವುದರಲ್ಲಿ ಮುನ್ನಡೆಯಿರಿ**

ಪ್ರೀತಿಯು ವಿವರಣೆಯನ್ನು ತಡೆಗಟ್ಟುತ್ತದೆ. ಅದು ಇನ್ನೊಬ್ಬರ ಒಳಿತನ್ನು ಬಯಸುವ ಬಾವೋದ್ವೇಗವನ್ನು ಉಂಟುಮಾಡುತ್ತದೆ. ಅದು ತನ್ನನ್ನು ತಾನೇ ಅರ್ಪಿಸುವ - ಮನೋ ಭಾವಕ್ಕೆ ನಡಿಸುತ್ತದೆ. ಅದರ ಬಗ್ಗೆ ಹೆಚ್ಚು ಹೇಳಲು ಅಸಾಧ್ಯ. ಆಸ್ಯ ಸೀಮೆಯ ಸಭೆಯು ದುರ್ಗಟನೆಗಳಲ್ಲಿ ಮತ್ತು ಹಿಂಸೆಗಳಲ್ಲಿ ಹಾದು ಹೋಗುವಾಗ, ಒಬ್ಬರನ್ನೊಬ್ಬರ ಹಾಗೂ ಕರ್ತನನ್ನು ಪ್ರೀತಿಸಬೇಕೆಂದು ಉತ್ತೇಜನ ನೀಡಲಾಯಿತು. ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳು ಮತ್ತು ಮಾನವ ತಪ್ಪುಗಳು ಉಂಟಾಗುವಾಗ ಪೇತ್ರನು, "ಪ್ರೀತಿಯು ಬಹು ಪಾಪಗಳನ್ನು ಮುಚ್ಚುತ್ತದೆ" ಎಂದು ಹೇಳಿದನು (4:8).

**ಅತಿಥಿ ಸತ್ಕಾರ ಮಾಡುವವರಾಗಿರಿ**

ಪರದೇಶದವರಿಗೂ ಮತ್ತು ಅತಿಥಿಗಳಿಗೂ ಮನೆಗಳಲ್ಲಿ ಅತಿಥಿ ಸತ್ಕಾರ ಮಾಡುವದು ಪೂರ್ವ ದೇಶಗಳಲ್ಲಿ ಮರೆಯಲಾಗದ ಸಂಗತಿಯಾಗಿತ್ತು. ಅದು ಅಲ್ಲಿಯ ಆಚರಣೆಯಾಗಿತ್ತು. ಆದಿಕಾಂಡ 18:1-8. ಅಬ್ರಹಾಮನ ಗುಡಾರದ ಬಳಿಯಲ್ಲಿ ಇಬ್ಬರು ಪರಕೀಯರು ನಿಂತಿರುವ ಚಿತ್ರಣವು, ಅವರ ಉತ್ತಮವಾದ ವಾಡಿಕೆಯಾಗಿತ್ತು. ಇಬ್ರಿಯ ಬರಹಗಾರನು ಈ ವಿಷಯದ ಕುರಿತು "ಅತಿಥಿ ಸತ್ಕಾರ ಮಾಡುವದನ್ನು ಮರೆಯ ಬೇಡಿರಿ. ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವ ದೂತರನ್ನು ಸತ್ಕರಿಸಿದ್ದಾರೆ" (ಇಬ್ರಿಯ 13:2).

ಬೋಧಕರು ಹಾಗೂ ಪ್ರವಾದಿಗಳು ಈ ಹೇಳಿಕೆಯ ಹಿಂದೆಯೇ ಇದ್ದರು ಪೇತ್ರ 4:9. ಅಲೆದಾಡುವ ಪ್ರಸಂಗಿಗಳಿಗೆ ಅತಿಥಿ ಸತ್ಕಾರ ಮಾಡುವ ವಿಷಯವು, ಯೋಹಾನನು ತನ್ನ ಪತ್ರವನು ಬರೆದ ಸಮಯದಲ್ಲಿ ಸಭೆಯ ಒಂದು ಸಮಸ್ಯೆಯಾಗಿತ್ತು. ಅನೇಕ ಸುಳ್ಳು ಪ್ರವಾದಿ ಗಳು ಲೋಕದಲ್ಲಿ ನುಸುಳಿದ್ದಾರೆ ಎಂದು ಯೋಹಾನನು ಎಚ್ಚರಿಸಿದ್ದನು (1 ಯೋಹಾನ 4:1). ಎರಡು ಮತ್ತು ಮೂರನೆಯ ಪತ್ರಿಕೆಯಲ್ಲಿ ಈ ಅಲೆದಾಡುವ ಪ್ರಸಂಗಿಗಳಿಗೆ ಯಾವಾಗ ಅತಿಥಿ ಸತ್ಕಾರ ನೀಡಬೇಕು ಮತ್ತು ಯಾವಾಗ ನೀಡಬಾರದು ಎಂಬ ಗೊಂದಲವು ಉಂಟಾಗಿತ್ತು.

**ದೇವರು ನಿಮಗೆ ನೀಡಿರುವ ವರದಾನಗಳನ್ನು ಉಪಯೋಗಿಸಿರಿ**

ಕ್ರೈಸ್ತರು ಹೊಂದಿರುವ ಎರಡು ವರಗಳ ಕುರಿತಾಗಿ ಮಾತ್ರ ಪೇತ್ರನು ಪೂರ್ಣವಿವರವನ್ನು ನೀಡಿದ್ದರು (ಮಾತನಾಡುವ ಹಾಗೂ ಸೇವೆ ಮಾಡುವ) ಅಲ್ಲಿ ಇತರೆ ವರಗಳು ಇದ್ದವು ಎಂದು ಸಂದೇಹವಿಲ್ಲದೆ ತಿಳಿದುಕೊಂಡಿದ್ದನು. ಹೊಸ ಒಡಂಬಡಿಕೆಯ ಒಂದು ಪ್ರಮುಖವಾದ ಬೋಧನೆ, ಕ್ರೈಸ್ತರು ಭಿನ್ನಾಭಿಪ್ರಾಯ ಪಡುವ ದರ ಕುರಿತಾಗಿರುತ್ತದೆ. ನಮ್ಮ ವರದಾನಗಳು ಏನೇ ಇರಲಿ, ಅದನ್ನು ದೇವರಿಗೆ ನೀಡುವದು ನಮ್ಮ ಜವಾಬ್ದಾರಿಯಾಗಿರುತ್ತದೆ. ಈ ಕೆಳಕಂಡ ವಾಕ್ಯಗಳಿಂದ ಇದರ ವಿವರಣೆಯನ್ನು ಹೊಂದುವದು ಯೋಗ್ಯವಾಗಿದೆ.

ಯೇಸು ನೀಡಿದ ಎಚ್ಚರ ಲೂಕ 12:48 ಆಸಕ್ತಿಕರವಾಗಿದೆ: "ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು." ಮೊಹರಿಗಳ ಕುರಿತಾದ ಸಾಮ್ಯವನ್ನು ಲೂಕನ ಸುವಾರ್ತೆಯಲ್ಲಿ ನೋಡುತ್ತೇವೆ (ಲೂಕ 19:11-27); ಮತ್ತಾಯದಲ್ಲಿ ತಲಾಂತುಗಳ ಸಾಮ್ಯವನ್ನು ನೋಡುತ್ತೇವೆ (ಮತ್ತಾಯ 25:14-30). ಅವುಗಳ ವಿವರಣೆಯಲ್ಲಿ ವ್ಯತ್ಯಾಸಗಳು ಇದ್ಯಾಗ್ಯೂ, ಸಂದೇಶವು ಒಂದೇ ಆಗಿರುತ್ತದೆ. ನಾವು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೆ ಹೋದರೆ, ದೇವರೊಂದಿಗಿನ ನಮ್ಮ ಸಂಬಂದವು ಹಾನಿಗೆ ಒಳಗಾಗುತ್ತದೆ.

ರೋಮಾಪುರ 12:6ರಲ್ಲಿ ಪೌಲನು, "ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ." ಅವನ ಓದುಗರು ಹೊಂದಿದ್ದ ಕೆಲವು ವರಗಳ ಕುರಿತು ತಿಳಿಸಿದ್ದಾನೆ, ಅದನ್ನು ಅವರು ಯಾವ ರೀತಿಯಲ್ಲಿ ಉಪಯೋಗಿಸ ಬೇಕು ಎಂಬ ವಿವರಣೆಯ ಜವಾಬ್ದಾರಿಯನ್ನು ನೀಡಿದ್ದಾನೆ. "ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ" ಎಂದು 1 ಕೊರಿಂಥ 12:4ರಲ್ಲಿ ಅವನು ಹೇಳಿದ್ದನು. 12:7ರಲ್ಲಿ "ಆದರೆ ಪ್ರತಿಯೊಬ್ಬನಲ್ಲಿ ತೋರಿ ಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ" ಎಂದು ಸೇರಿಸಿದನು.

4:10, 11ರಲ್ಲಿ ತನ್ನ ಓದುಗರಿಗೆ ಪೇತ್ರನ ಸಲಹೆಯು ಕ್ರೈಸ್ತರಿಗೆ ದೇವರು ನೀಡಿರುವ ವರದಾನಗಳನ್ನು ಉಪಯೋಗಿಸುವ ಜವಾಬ್ದಾರಿಯ ಕುರಿತು ತಿಳಿಸಿದ್ದಾನೆ. ಅವನ ವರಗಳಲ್ಲಿ ಇರುವ ವ್ಯತ್ಯಾಸವೇನೆಂದರೆ, ಅವನು ಎರಡು ವರಗಳನ್ನು ಒತ್ತಿ ಹೇಳಿದನು; ಮಾತಾಡುವುದು ಮತ್ತು ಸೇವೆ ಮಾಡುವ ವರಗಳಲ್ಲಿ ಇತರ ಎಲ್ಲಾ ವರಗಳು ಒಳಗೊಂಡಿವೆ. ಮಾತಾಡುವ ವರವನ್ನು ಹೊಂದಿರುವವನು, ಅದರ ಗಂಭೀರತೆಗೆ ಹೊಣೆಯಾಗಬೇಕು: "ದೈವೋಕ್ತಿಯನ್ನು ನುಡಿಯುವವನಾಗಿ ಬೋಧಿಸಲಿ" (4:11). KJVಯಲ್ಲಿ "ದೇವರ ದಿವ್ಯವಾಣಿ ಎಂದು ತಿಳಿದು ಮಾತಾಡಲಿ" ಮತ್ತು NIVಯಲ್ಲಿ "ದೇವರ ಮಾತುಗಳನ್ನೇ ಆಡುವವನಾಗಿರಲಿ." ದೇವರು ನೀಡುವ ಸಂದೇಶದಲ್ಲಿ ಅವಲಂಬನೆ ಮಾಡದಿರುವ ಯಾವದೇ ಪ್ರಸಂಗಿಯಾಗಲೀ ಅಥವಾ ಪ್ರವಾದಿಯಾಗಲೀ, ಅವನು ಅಪೊಸ್ತಲನ ಸಲಹೆಗಳನ್ನು ನಿರಾಕರಿಸುವವನಾಗಿದ್ದಾನೆ.

ಎಲ್ಲಾ ಕ್ರೈಸ್ತರು ಸಾರ್ವಜನಿಕ ಸ್ಥಳಗಳಲ್ಲಿ ಬೋಧಿಸಲು ಮತ್ತು ಮಾತನಾಡಲು ಸಾಧ್ಯವಿಲ್ಲ, ಆದರೆ ತನ್ನನ್ನು ತಾನು ದೇವರ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರತಿಯೊಬ್ಬನು ವರಗಳನ್ನು ಹೊಂದಿರುತ್ತಾನೆ. "ಒಬ್ಬನು ಸಭೆಯ ಸೇವೆ ಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ" (4:11). "ಸೇವೆ" ಎಂಬುದು ಕ್ರಿಯಾಪದ ವಾಗಿದೆ. ಅದು ಗ್ರೀಕ್ ಭಾಷೆಯಲ್ಲಿ "ಡೀಕನ" ಎಂಬುದಾಗಿ, ಆದರೆ ಪೇತ್ರನು ಸೇವೆ ಎಂಬುದನ್ನು ಡೀಕನ್ ಎಂಬ ಪರಿಮಿತಿಗೆ ತರಲಿಲ್ಲ. ಸೇವೆ ಅಂದರೆ ದೇವರ ಮಹತ್ವಗಳನ್ನು ಪ್ರಚುರಪಡಿಸುವುದು ಎಂಬುದಾಗಿದೆ (ಮತ್ತಾಯ 20:25, 26). ನಾವು ದೇವರನ್ನು ಮೆಚ್ಚುಗೆ ಪಡಿಸಬೇಕಾದರೆ, ದೇವರು ನಮಗೆ ನೀಡಿರುವ ವರಗಳನ್ನು ಉಪಯೋಗಿಸುವ ಮೂಲಕ ನಮ್ಮ ನಿರೀಕ್ಷೆಗೆ ಆಧಾರವೇನೆಂದು ಇತರರಿಗೆ ತಿಳಿಸ ಬೇಕು.

## ಮುಕ್ತಾಯ

1 ಪೇತ್ರನ ಎರಡು ಪ್ರಾಮುಖ್ಯ ಅಂಶಗಳು - ಕ್ರೈಸ್ತರು ಪಡುವ ಬಾಧೆಗಳು ಮತ್ತು ಕರ್ತನ ಪುನರಾಗಮನ - ಅವು ಸಂದೇಶದ ಮೂಲವಾಗಿರುತ್ತವೆ 4:1-11. ಕ್ರಿಸ್ತನ ಬಾಧೆಗಳಲ್ಲಿ ಅನುಭವ ಪಡೆದ ನಂತರ, ಅವರ ಮೇಲೆ ಅಧಿಕಾರ ನಡೆಸುತ್ತಿದ್ದ ಹಳೆ ತನಗಳಿಗೆ ಸಾಯ ಬೇಕು ಅಂದನು. ಒಂದು ವೇಳೆ ಜನರು ಪೇತ್ರನ ಮಾತುಗಳನ್ನು ಕೇಳುವವರಾದರೆ, ತಮ್ಮ ಪರಿಶುದ್ಧವಾದ ಜೀವಿತದ ಮೂಲಕ ಹಿಂಸೆಯನ್ನು ಮತ್ತು ವಿರೋಧವನ್ನು ಎದುರಿಸುತ್ತಾರೆ.

ಯಾಕೆಂದರೆ ಪೇತ್ರನು ಮತ್ತು ಮೊದಲ ಶತಮಾನದ ಕ್ರೈಸ್ತರು ಯೇಸುವಿನ ಪುನರಾಗ ಮನವನ್ನು ನಿರೀಕ್ಷಿಸುತ್ತಿದ್ದರು, ಆದುದರಿಂದ ಅಪೋಸ್ತಲರು ಪ್ರಭೋಧಿಸಿದರು. ಅವರಿಗೆ ಅಲ್ಪ ಸಮಯ ಮಾತ್ರವಿತ್ತು. ಮಾಡುವದನ್ನು ಬೇಗನೆ ಮಾಡಬೇಕಿತ್ತು. ರಕ್ಷಣೆ ಹೊಂದುವವರಿಗೆ ಬೋಧಿಸಬೇಕಿತ್ತು. ಮತ್ತು ಕರ್ತನ ಬರುವಿಕೆಗಾಗಿ ಅವರು ಸಿದ್ಧರಾಗಬೇಕಿತ್ತು. ಪೇತ್ರ 1:6 ಕ್ರಿಸ್ತನು ಅವರಿಗೆ ನೀಡುವ ಮಹಾಸಂತೋಷದ ಕುರಿತಾಗಿ ನೆನಪಿಸಿದ್ದನು. ಆದರೆ ಅವನು ತಿಳಿಸಿ, “ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ, ... ನಾನಾ ಕಷ್ಟಗಳಲಿದ್ದು ದುಃಖಿಸುವವರಾಗಿದ್ದರೂ.” ಬಾಧೆಯು ಅಲ್ಪಕಾಲ ಮಾತ್ರ ಎಲ್ಲವುಗಳ ಅಂತ್ಯವು ಹತ್ತಿರವಾ ಗಿತ್ತು. ಆ ದಿನದ ಕ್ರೈಸ್ತರಿಗೂ ಮತ್ತು ಈ ದಿನದವರಿಗೂ ಕರ್ತನ ಬರೋಣವು ಹತ್ತಿರವಾ ಗಿದೆ ಎಂಬುದೇ ಉತ್ತರವಾಗಿದೆ. ನಾವು ಕಡೇ ಕಾಲದಲ್ಲಿ ಜೀವಿಸುತ್ತಿದ್ದೇವೆ. ಈ ಗ್ರಹಿಕೆಯು ಕ್ರೈಸ್ತರಿಗೆ ತಾನು ಹೊಂದಿರುವ ವಿಷಯದಲ್ಲಿ ತಾನು ಕಲಿತಿರುವ ವಿಷಯಗಳಲ್ಲಿ, ಅವನು ತನ್ನ ಜೀವಿತದಲ್ಲಿ ಮಾಡಬೇಕಾದ ವಿಷಯಗಳಲ್ಲಿ, ಸರಿಯಾದ ದೂರದೃಷ್ಟಿಯನ್ನು ನೀಡುತ್ತದೆ. ಹಾಗೆಯೇ ಆಗಲಿ, “ಕರ್ತನಾದ, ಯೇಸುವೇ ಬೇಗನೆ ಬಾ.”